ಮರುದಿವಸ ಮತ್ತೆ ಶಾಲೆಗೆ ಹೋಗುವಾಗ ಎಲ್ಲಿ ಬಿಟ್ಟು ಬಂದಿದ್ದೆನೋ ಅಲ್ಲಿಂದ ಮತ್ತಷ್ಟು ದೂರಕ್ಕೆ ಹೋಗಿ ಬಿಟ್ಟು ಬಂದಿದ್ದೆ. ಸಂಜೆ ಶಾಲೆಯಿಂದ ಬರುವಾಗ ನನ್ನ ಜೊತೆ ಅದು ಮತ್ತೆ ಮನೆಗೆ ಮರಳಿ ಬಂತು.!. ಅಪ್ಪ ಅದನ್ನು ಕಂಡು,`ಇದು ಇಲ್ಲಿಯೇ ಇರಲಿ. ಒಂದಿಷ್ಟು ರೊಟ್ಟಿಯೋ ಚಪಾತಿಯೋ ಹಾಕುತ್ತ ಇರೋಣ' ಅಂದಿದ್ದರು. ಅಜ್ಜಿ ಮಾತ್ರ ಅದನ್ನು ಕಂಡ ಕೂಡಲೇ ಮುಖ ಸಿಂಡರಿಸಿಕೊಳ್ಳುತ್ತಿದ್ದರು. 'ದರಿದ್ರ ಗಲೀಜು ಮೈಲಿಗೆ' ಎಂದೆಲ್ಲ ಬಯ್ಯುತ್ತಿದ್ದರು. ಅಪ್ಪ ಪೂಜೆ ಮಾಡುವಾಗ ಅಜ್ಜಿ ಜಾಗಟೆ ಬಡಿಯುತ್ತಿದ್ದಳು. ಮುಸ್ಸಂಜೆ ಶಂಖ ಊದುತ್ತಿದ್ದಳು. ಆ ಸಂದರ್ಭದಲ್ಲಿ ನಾಯಿಯು ಆಕಾಶದ ಕಡೆಗೆ ಮುಖ ಮಾಡಿ ವಿಚಿತ್ರ ಧ್ವನಿಯಿಂದ ಕೂಗುತ್ತಿತ್ತು. ಅಂತ ಸಂದರ್ಭಗಳಲ್ಲಿ ಅಜ್ಜಿಗೆ ವಿಪರೀತ ಸಿಟ್ಟು ಬರುತ್ತಿತ್ತು. 'ಥೂ ದರಿದ್ರ ನಾಯಿ! ಬೆಳಿಗ್ಗೆ ಅಂತಲ್ಲ, ಸಂಜೆ ಅಂತಲ್ಲ ಅಪಶಕುನವನ್ನು ಮನೆ ಒಳಗೆ ಕರೆಯುತ್ತದೆ. ಯಾರ ಸಾವಿನ ಸುದ್ದಿ ಕೇಳಿಕ್ಬೇಕಂತಾ ಏನ.' ಎಂದು ಬಯ್ಯುತ್ತಿದ್ದಳು. ನಾಲ್ಕಾರು ತಿಂಗಳ ಬಳಿಕ ಬೇಸಿಗೆಯ ಒಂದು ದಿನದಲ್ಲಿ ಅಜ್ಜಿ ಅಂಗಳದಲ್ಲಿ ಹಪ್ಪಳ ಒಣಗಿಸುತ್ತಿದ್ದರು. ಆಗ ಆ ನಾಯಿಮರಿ ಓಡಿಬಂದು ಅಜ್ಜಿಯ ಹಿಂಭಾಗ ಬೊಗಳುತ್ತಿತ್ತು. ಹತ್ತಿರ ಇದ್ದ ದೊಣ್ಣೆಯಿಂದ ಬಡಿದು ಓಡಿಸಲು ನೋಡಿದರು. ಅದು ಮತ್ತೆ ಬೊಗಳುತ್ತ ಏನನ್ನೋ ತೋರಿಸಲು ಹೊರಟಿತು. ಅವರು ಎದ್ದು ಹಿಂದಿರುಗಿ ನೋಡಿದರೆ ನಾಗರಹಾವು ಒಂದು ಹೆಡೆ ಬಿಚ್ಚಿತ್ತು. ಸ್ವಲ್ಪ ಹೆಚ್ಚು ಕಡಿಮೆಯಾಗಿದ್ದರೆ ಹಾವು ಅಜ್ಜಿಯನ್ನು ಕಚ್ಚುತ್ತಿತ್ತು. ಅಂದಿನಿಂದ ಅಜ್ಜಿಗೆ ಆ ನಾಯಿಯನ್ನು ಕಂಡರೆ ವಿಪರೀತ ಪ್ರೀತಿ ಶುರುವಾಯಿತು. ತನ್ನ ಪ್ರಾಣ ಉಳಿಸಿದ ರಕ್ಷಕ ಎಂದು



ಆಕೆ ಅಭಿಮಾನದಿಂದ ಹೇಳತೊಡಗಿದಳು. ತಮಾಷೆಯ ವಿಷಯವೇನೆಂದರೆ ಆಕೆಯ ಮಡಿಯೂ ಕೂಡ ನಿಧಾನವಾಗಿ ಡೈಲ್ಯೂಟ್ ಆಗತೊಡಗಿತು. ಆ ನಾಯಿಗೂ ನಮಗಿಂತ ಹೆಚ್ಚಾಗಿ ಅಜ್ಜಿಯೊಂದಿಗೆ ಅಪಾರ ಗೆಳೆತನ ಬೆಳೆಯಿತು. ಹಿಂದೆಲ್ಲ ಅದರ ನೆರಳು ಸೋಕಿದರೂ ಇಸ್ಸೀ ಪಿಸ್ಸೀ ಅನ್ನುತ್ತಿದ್ದವಳು ನಂತರ ಅದರ ಮೈಮುಟ್ಟಿಯೇ ಮಾತನಾಡಿಸುತ್ತಿದ್ದಳು.

ನಿವೃತ್ತಿಯ ನಂತರ ಬೆಂಗಳೂರಲ್ಲಿ ನೆಲೆಸಲು ಬಂದಿದ್ದೆ. ಬಡಾವಣೆ ಅಕ್ಕಪಕ್ಕದವರೆಲ್ಲ ಹೊಸಬರು. ಕೆಲಸರಹಿತನಾಗಿದ್ದು ನನಗೆ ಸಮಯ ಕಳೆಯುವುದು ಬಹಳ ಕಷ್ಟದ ಕೆಲಸವಾಗಿತ್ತು. ಅಕ್ಕಪಕ್ಕದವರ ಗೆಳೆತನ ಮಾಡಿಕೊಂಡು ಹರಟೆ ಹೊಡೆಯಬೇಕು ಎಂದು ಯೋಚಿಸುತ್ತಿದ್ದೆ. ಒಂದು ಭಾನುವಾರದ ದಿನ. ಪಕ್ಕದ ಮನೆಯ ಗಂಡ ಹೆಂಡತಿ ಬೆಳಗಿನ ಹೊತ್ತು ವಾಕಿಂಗ್‌ಗೆ ಹೊರಟವರು ನಮ್ಮನ್ನು ನೋಡಿ ನಕ್ಕರು. ನಾವೂ ಗಂಡ ಹೆಂಡತಿ ಹಲ್ಲು ಬಿಟ್ಟೆವು. 'ಇತ್ತೀಚೆಗೆ ಊರಿಗೆ ಬಂದಿರಾ?' ಅಂತ ಕೇಳಿದರು. ಹೀಗೆ ಪ್ರಾರಂಭವಾದ ಪರಿಚಯ ಇತಿ ವೃತ್ತಗಳ ಸಂಪೂರ್ಣ ಮಾಹಿತಿ ಪಡೆದುಕೊಳ್ಳುವವರೆಗೆ ಮುಂದುವರೆಯಿತು.

ಒಂದು ದಿನ ಅವರ ಬಳಿ ಮಾತನಾಡುತ್ತಿದ್ದಾಗ, 'ನಮ್ಮ ಪಾಪು ಹೇಳಿದ್ದನ್ನು ಕೇಳುತ್ತಿಲ್ಲ. ತುಂಟಾಟ ವಿಪರೀತವಾಗಿದೆ. ಸರಿಯಾಗಿ ಊಟ ತಿಂಡಿಯೂ ಮಾಡುತ್ತಿಲ್ಲ' ಅಂತೆಲ್ಲ ನನ್ನ ಬಳಿ ಹೇಳಿದರು. ನನಗೆ ಅವರ ಮಾತು ಕೇಳಿ ಒಂದು ಬಾರಿ ಗಾಬರಿಯಾಯಿತು. ಏಕೆಂದರೆ ಅವರು ಕೂಡ ನನ್ನಂತೆಯೇ ನಿವೃತ್ತರು. ಅರುವತ್ತೈದರ ಆಸುಪಾಸಿನವರು. ಅವರಿಗೆ ಮಾತು ಕೇಳದಷ್ಟು ಸಣ್ಣ ಮಕ್ಕಳು ಇದ್ದಿರಬಹುದೇ? ಅಥವಾ ಮೊಮ್ಮಕ್ಕಳು ಆಗಿರಬಹುದೇ? ಎಂದು ಗುಮಾನಿ ಆಯಿತು. ಏನಾದರೂ ಆಗಲಿ ಎಂದು ಸಲಹೆ ಕೊಡುತ್ತ, 'ಹೌದು ಸಣ್ಣ ಪಾಪುಗಳು ಹೇಳಿದ ಮಾತನ್ನೇ ಕೇಳುವುದಿಲ್ಲ. ಎಷ್ಟು ವರ್ಷ ನಿಮ್ಮ ಪಾಪುಗೆ? ಸ್ಕೂಲಿಗೆ ಹಾಕುವ ವಯಸ್ಸಾಯ್ತಾ? ಹಾಗಿದ್ದರೆ ಸ್ಕೂಲಿಗೆ ಹಾಕಿಬಿಡಿ. ಇನ್ನು ಊಟ ತಿಂಡಿ ಅಂತೂ ಹೆಚ್ಚಿನ ಕಡೆ ಮಕ್ಕಳು ಸರಿಯಾಗಿ ಮಾಡುವುದೇ ಇಲ್ಲ. ಯಾವುದಾದರೂ ಸರಿಯಾದ ಡಾಕ್ಟರ್‌ಗಳಿಗೆ ತೋರಿಸಿ. ಪ್ಯಾಕ್ ಮಾಡಿದ ರೆಡಿಮೇಡ್ ಆಹಾರವನ್ನು ಮಕ್ಕಳಿಗೆ ಕೊಡಲೇಬೇಡಿ. ಬೇಗ ಅವುಗಳ ಆರೋಗ್ಯ ಹಾಳಾಗುತ್ತದೆ. ಮಕ್ಕಳಿಗೆ ಬೊಜ್ಜು, ಸಕ್ಕರೆ ಕಾಯಿಲೆ ಮೊದಲಾದವು ಬೇಗನೆ ಬಂದು ಸೇರಿಕೊಳ್ಳುತ್ತದೆ.' ಎಂದೆಲ್ಲ ಒಂದೇ ಸಮನೆ ನಾನು ಹೇಳುತ್ತಿದ್ದೆ. ಅವರು ಒಂದು ಕ್ಷಣ ನನ್ನನ್ನು ದುರುಗುಟ್ಟಿ ನೋಡಿದರು. ' ಅಯ್ಯೋ ಡಾಗ್‌ಗೆ ಯಾವ ಸ್ಕೂಲ್ರೀ? ನಾವು ಅದನ್ನು ಪಾಪು ಅಂತಲೇ ಪ್ರೀತಿಯಿಂದ ಕರೆಯುವುದು' ಅಂತ ಹೇಳಿದರು. ನಾನು, ' ಓ,. ನಾಯಿಯಾ!? ಅದರ ಬಗ್ಗೆ ನೀವು ಇಷ್ಟೆಲ್ಲ ಹೇಳಿದ್ದಾ!?' ಎಂದು ತಾತ್ಸಾರದ ಧ್ವನಿಯಿಂದ ಹೇಳಿದೆ. ' ಅದು ಯಾಕ್ರೀ. ನಮ್ಮ ಡಾಗನ್ನು ನಾಯಿ ಅಂತ ಹೇಳ್ತೀರಿ. ಅಷ್ಟೆಲ್ಲ ತಾತ್ಸಾರ ಮಾಡಬೇಡಿ' ಎಂದು ಗರಂ ಆದರು. ನನಗೂ ಒಂದು ರೀತಿ ಸಿಟ್ಟು ಬಂತು. 'ನೀವು ಇಂಗ್ಲಿಷ್‌ನಲ್ಲಿ ಡಾಗ್ ಎಂದು ಹೇಳುತ್ತೀರಿ. ನಾನು ನಾಯಿ ಅಂದೆ ಕನ್ನಡದಲ್ಲಿ ಅಷ್ಟೇ. ಅರ್ಥ ಎರಡು ಒಂದೇ ಅಲ್ಲವೇ? ಎಂದೆ. 'ಅದು ಹ್ಯಾಗ್ರೀ ನಾಯಿಯನ್ನು ನಾಯಿ ಅಂತೀರಿ. ನಾಯಿಯನ್ನು ನಾಯಿ ಎಂದರೆ ತುಂಬಾ ಡೌನ್ ಮಾಡಿದ ಹಾಗೆ. ಹಾಗೆಲ್ಲ ತುಂಬಾ ಕೀವಲವಾಗಿ ಮಾತಾಡ್ಬೇಡಿ.' ಅಂತ ಸಿಟ್ಟಿನ ಮುಖ ಮಾಡಿಕೊಂಡು ದುಮುದುಮು ಮಾಡುತ್ತ ಹೋಗಿಬಿಟ್ಟರು.!

ಆಮೇಲೆ ತಿಳಿದ ಸಂಗತಿ ಏನೆಂದರೆ, ಅವರಿಗೆ ಮಕ್ಕಳಿರಲಿಲ್ಲ. ತಾವು ಸಾಕಿದ ನಾಯಿಗೆ ಅವರು ಪಾಪು ಎಂದು ಹೆಸರಿಟ್ಟಿದ್ದರು. ಅದನ್ನೇ ಅವರು ತಮ್ಮ ಮಗು ಎಂದು ಭಾವಿಸಿದ್ದರು. ಅವರ ಭಾವನೆಗಳನ್ನು ನಾನು ಗಾಸಿ ಮಾಡಿಬಿಟ್ಟೆ ಎಂದು ಆಮೇಲೆ ನನಗೆ ಅನಿಸಿತು. ನನ್ನ ವ್ಯಾಖ್ಯಾನದಿಂದ ಸಿಟ್ಟುಗೊಂಡಿದ್ದ ಅವರು ಎದುರಾದರೂ ಮುಖ ನೋಡುತ್ತಿರಲಿಲ್ಲ. ಕೆಲವು ಸಮಯದ ನಂತರ ಅವರ ಬಳಿ ಕ್ಷಮೆ ಕೋರಿ ಬಿಗುವಿದ್ದ ಮುಖದಲ್ಲಿ ನಗು ಬರುವಂತೆ ಮಾಡಿದೆ. ವಾಕಿಂಗ್ ಹೋಗುವ ಸಮಯದಲ್ಲಿ ನಾನು ಕೂಡ ಅವರ ಜೊತೆಯಲ್ಲಿದ್ದ ಪಾಪುವನ್ನು ಮಾತನಾಡಿಸ ತೊಡಗಿದೆ. ಆ ಪಾಪು ನನಗೂ ಕೂಡ ಜೊತೆಯಾಗಿ ಬಿಟ್ಟ.

ಇದೆಲ್ಲ ಕಳೆದು ಒಂದು ತಿಂಗಳಾಗಿರಬಹುದು ಅಷ್ಟೇ. ಒಂದು ದಿನ ಪತ್ರಿಕೆ ಓದುತ್ತಿದ್ದಾಗ ಒಂದು ವಿಚಿತ್ರ ಸುದ್ದಿ ಕಣ್ಣಿಗೆ ಬಿತ್ತು. ಅದು ಏನೆಂದರೆ ಚೆನ್ನೈಯಲ್ಲಿ ಅಕ್ಕಪಕ್ಕದವರ ಇಬ್ಬರ ನಡುವೆ ಜಗಳವಾಗಿತ್ತು. ಆ ಜಗಳಕ್ಕೆ ಕಾರಣವೇನೆಂದರೆ ಪಕ್ಕದ ಮನೆಯಾತ ನಾಯಿ ಇದ್ದ ಮನೆಯಾತನನ್ನು ನಿನ್ನ ಮನೆಯ ನಾಯಿ ಬೊಗಳಿ ನಮಗೆ ತೊಂದರೆ ಕೊಡುತ್ತಿದೆ ಎಂದು ದೂರು ಕೊಟ್ಟಿದ್ದ. 'ಏನೆಂದೇ!? ನನ್ನ ನಾಯಿಯನ್ನು ನಾಯಿ ಎನ್ನುತ್ತೀಯಾ!?' ಎಂದು ಹೇಳಿದವನೇ ಬಂದೂಕು